**<u>ದಿನಾಂಕಃ22-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ- ಅರ್ಜಿದಾರ ಪರಃ ಶ್ರೀ ಜಿ.ಡಿ. ವಕೀಲರಿಂದಃ-</u>**

ಅರ್ಜಿದಾರ ನನ್ನ ಬಾವ. ನನ್ನ ಮತ್ತು ಅರ್ಜಿದಾರನ ನಡುವೆ ಮಾತುಕತೆ ಇಲ್ಲ. ನನ್ನ ಮತ್ತು ಅರ್ಜಿದಾರನ ನಡುವೆ 2010 ರಿಂದ ಮಾತುಕತೆ ಇಲ್ಲ ಎಂದರೆ ಸರಿ. ನಿಆರ್-2 ರ ಉಯಿಲನ್ನ 2017 ರಲ್ಲಿ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಬರೆಯಲಾಯಿತು. ಸದರಿ ವಿಲ್ ಅನ್ನ ಗಿರಿಜಮ್ಮ ಇವರ ಜೊತೆ ಇದ್ದ ಕಾರಂತ್ ವಕೀಲರು ತಯಾರಿಸಿಕೊಂಡು ಬಂದಿದ್ದರು. ಸಾಕ್ಷಿ ಮುಂದುವರಿದು ನನ್ನ ಸಮಕ್ಷಮದಲ್ಲಿ ಉಪನೊಂಣಾಧಿಕಾರಿ ಕಛೇರಿಯಲ್ಲಿ ಸದರಿ ವಿಲ್ ಮೇಲೆ ಸಹಿ ಮಾಡಿದರು ಎನ್ನುತ್ತಾರೆ. ಉಪನೊಂಣಾಧಿಕಾರಿ ಕಛೇರಿಯಲ್ಲಿ ವಿಲ್ ಮೇಲೆ ಸಹಿ ಮಾಡಿದ್ದನ್ನು ಹೊರತುಪಡಿಸಿ ನಿಮಗೆ ಬೇರೆ ಏನೂ ಗೊತ್ತಿಲ್ಲ ಎಂದರೆ ಸಾಕ್ಷಿ ಗಿರಿಜಮ್ಮ ಇವರು ತನ್ನ ಗಂಡನಿಂದ ತನಗೆ ಬಂದಿರುವ ಆಸ್ತಿಯನ್ನ ಸಹಜನ್ ಇವರಿಗೆ ವಿಲ್ ಮಾಡುತ್ತಿದ್ದೇನೆ ಎಂದು ತಿಳಿಸಿದ್ದರು ಎನ್ನುತ್ತಾರೆ. ಗಿರಿಜಮ್ಮ ಇವರು ಫೋನ್ ಮುಖಾಂತರ ಆ ದಿನ ಬೆಳಗ್ಗೆಃ10.00 ಗಂಟೆಗೆ ತಾನು ವಿಲ್ ಬರೆಯುತ್ತಿರುವ ವಿಚಾರ ನನಗೆ ತಿಳಿಸಿದರು. ನನ್ನ ಸಮಕ್ಷಮದಲ್ಲಿ ಗಿರಿಜಮ್ಮ ಸಹಿ ಮಾಡಿದರು ಆನಂತರ ನಾನು ಸಹಿ ಮಾಡಿದೆ. ನನ್ನ ಸಮಕ್ಷಮದಲ್ಲಿ ಮತ್ತೊಬ್ಬ ಸುರೇಶ್ ಎನ್ನುವವರೂ ಸಹ ವಿಲ್ ಮೇಲೆ ಸಹಿ ಮಾಡಿದರು. ನಾವು ಮೂರು ಜನ ವಿಲ್ ಮೇಲೆ ಸಹಿ ಮಾಡಿದ್ದನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿಲ್ಲ. ನನ್ನ ಸಮಕ್ಷಮದಲ್ಲಿ ಗಿರಿಜಮ್ಮ ಇವರು ನಿಆರ್-2 ರ ವಿಲ್ ಮೇಲೆ ಸಹಿ ಮಾಡಿಲ್ಲ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃವಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಓ.ಎಸ್.ನಂಃ
ಪಿ.ಡಬ್ಲ್ಯೂಃ

ಎಸ್ಆರ್ಃ